ಆಕಾಶವಾಣಿ

**09.07.2024**

ಪ್ರದೇಶ ಸಮಾಚಾರ

ಓದಿದವರು: ವಿವೇಕಾದಿತ್ಯ ಕನಿಯಾಲ

<><><>

ಮುಖ್ಯಾಂಶಗಳು:

- ಡೆಂಘಿ ನಿಯಂತ್ರಣಕ್ಕೆ, ಅಧಿಕಾರಿಗಳು ಸಮನ್ವಯದಿಂದ ಸಮರೋಪಾದಿ ಕೆಲಸ ಮಾಡಿ – ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ.
- ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ಸಾರ್ವಜನಿಕರು ಸಹಕರಿಸಿ – ಆರೋಗ್ಯ ಇಲಾಖೆ, ಕರೆ.
- ಮೌಢ್ಯತೆ ಆಚರಿಸಲು, ಮಕ್ಕಳು ಬಾಣಂತಿಯರನ್ನು, ಕೃ ್ಣ ಕುಟೀರದಲ್ಲಿ ಬಿಡಬೇಡಿ – ನಾಗಲಕ್ಷ್ಮೀ ಚೌಧರಿ, ಮನವಿ.
- ಕರಾವಳಿಯಲ್ಲಿ ಮುಂದಿನ ಮೂರು ದಿನ ಧಾರಾಕಾರ ಮಳೆ; ಉಡುಪಿ ಜಿಲ್ಲೆಯ ಶಾಲಾ–ಕಾಲೇಜುಗಳಿಗೆ ಇಂದು ರಜೆ.

<><><>

ಈಗ ವಾರ್ತೆಗಳ ವಿವರ

<><><>

ಹರ್ಷ

ಪ್ರದೇಶ ಸಮಾಚಾರ
**09.07.2024**
ಸಿದ್ದುಡೆಂಘಿ

ರಾಜ್ಯದಲ್ಲಿ ಡೆಂಘಿ ಪ್ರಕರಣಗಳು, ಏರುಗತಿಯಲ್ಲಿರುವ ಹಿನ್ನೆಲೆ, ಡೆಂಘಿ ಜ್ವರ ನಿಯಂತ್ರಣಕ್ಕೆ, ಸಮರೋಪಾದಿಯಲ್ಲಿ ಪರಸ್ಪರ ಸಂಯೋಜನೆಯಿಂದ, ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯಾಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು ಬದ್ಧತೆಯಿಂದ ಕೆಲಸ ಮಾಡುವಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನ ನೀಡಿದ್ದಾರೆ.

ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ, ವಿಧಾನಸೌಧದಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆಯಿತು.

ರಾಜ್ಯದ ಅಭಿವೃದ್ಧಿ ಮತ್ತು ಕಾನೂನು ಸುವ್ಯವಸ್ಥೆ ಪರಸ್ಪರ ಪೂರಕವಾಗಿದ್ದು, ಅಧಿಕಾರಿಗಳು ಜವಾಬ್ದಾರಿ ಅರಿತು ಕೆಲಸ ಮಾಡುವಂತೆ, ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸರ್ಕಾರದ ಕಾರ್ಯಕ್ರಮ, ಜನಪರ ಯೋಜನೆಗಳನ್ನು, ಪರಿಣಾಮಕಾರಿಯಾಗಿ ಜನರಿಗೆ ತಲುಪಿಸಲು, ಅಧಿಕಾರಿಗಳು ಕ್ರಿಯಾಶೀಲತೆಯಿಂದ ಹಾಗೂ ಸಮನ್ವಯತೆಯಿಂದ ಕೆಲಸ ಮಾಡಬೇಕು. ಆಗ ಮಾತ್ರ ಸರ್ಕಾರದ ಯೋಜನೆಗಳು ಸಕಾಲಿಕವಾಗಿ, ಜನರನ್ನು ತಲುಪಲು ಸಾಧ್ಯ ಎಂದು, ಮುಖ್ಯಮಂತ್ರಿ ಹೇಳಿದರು.

ಹರ್ಷ/ಹೊಂಗಲ್/ಮು.ಮಂ.ಎಕ್ಸ್ ಖಾತೆ/ಕೆ.ವಾ.ಇ.ಬೆಂ.ಆ.

ಪ್ರದೇಶ ಸಮಾಚಾರ
**09.07.2024**
ಡೆಂಘಿ/ನಿಯಂತ್ರಣ

ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶಪಡಿಸುವುದು ಸೇರಿದಂತೆ, ವಿವಿಧ ಮುನ್ನೆಚ್ಚರಿಕೆ ಕ್ರಮಗಳ ಮೂಲಕ, ಝೀಕಾ ವೈರಾಣು ತಡೆಗಟ್ಟಲು ಸಾರ್ವಜನಿಕರು ಸಹಕರಿಸುವಂತೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮನವಿ ಮಾಡಿದೆ.

ಡೆಂಘಿ, ಚಿಕೂನ್ ಗುನ್ಯಾ, ಝೀಕಾ ಮುಂತಾದ ರೋಗಗಳು ಸೊಳ್ಳೆಗಳ ಕಡಿತದಿಂದ ಹರಡುತ್ತವೆ. ನಿಂತ ನೀರು ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಈ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಕಚ್ಚುತ್ತವೆ.

ತೀವ್ರ ಜ್ವರದ ಲಕ್ಷಣಗಳು ಕಂಡುಬಂದಲ್ಲಿ, ಕೂಡಲೇ ಪರೀಕ್ಷೆ ಮಾಡಿಸಿಕೊಂಡು, ಸಕಾಲಿಕ ಚಿಕಿತ್ಸೆ ಪಡೆದುಕೊಳ್ಳಿ ಎಂದು, ಆರೋಗ್ಯ ಇಲಾಖೆ ಮನವಿ ಮಾಡಿದೆ.

ರಾಜ್ಯದಲ್ಲಿ ಡೆಂಘಿ ಪ್ರಕರಣಗಳು ಹೆಚ್ಚುತ್ತಿದ್ದು, ಜನರು ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳುವುದರೊಂದಿಗೆ, ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ಡೆಂಘಿ ಬಾರದಂತೆ ಜಾಗ್ರತೆ ವಹಿಸಲು, ಸಾರ್ವಜನಿಕರಲ್ಲಿ ಕೋರಲಾಗಿದೆ.

ಹರ್ಷ/ಹೊಂಗಲ್/ಆ ಮತ್ತು ಕು.ಕ.ಇ. ಎಕ್ಸ್ ಖಾತೆ

ಪ್ರದೇಶ ಸಮಾಚಾರ
**09.07.2024**
ದಿನೇಶ್/ಅಂಗಾಂಗ ದಾನ

ರಾಜ್ಯದಲ್ಲಿ ಅಂಗಾಂಗ ದಾನಿಗಳ ಸಂಖ್ಯೆ ಸಾವಿರ ದಾಟಿರುವುದು ಹೊಸ ಮೈಲುಗಲ್ಲು ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಅಂಗಾಂಗ ದಾನದ ಬಗೆಗಿನ ಎಲ್ಲ ಮಿಥ್ಯಗಳನ್ನು ಬದಿಗಿರಿಸಿ, ಸಾರ್ವಜನಿಕರು ಈ ಮಹತ್ಕಾರ್ಯದಲ್ಲಿ ಪಾಲ್ಗೊಂಡು, ಇನ್ನೊಬ್ಬರ ಜೀವ ಉಳಿಸಲು ನೆರವಾಗಬೇಕು;

ಅಂಗಾಂಗ ದಾನದ ಮಹತ್ವ ಸಾರಲು ಮತ್ತು ಅಂಗಾಂಗ ದಾನಿಗಳನ್ನು ಪ್ರೋತ್ಸಾಹಿಸಲು, ಸರ್ಕಾರ ಅಂಗಾಂಗ ದಾನಿಗಳ ಕುಟುಂಬಕ್ಕೆ ಅಭಿನಂದನಾ ಪತ್ರ ನೀಡಿ, ಗೌರವಿಸಲಿದೆ ಎಂದು, ಸಚಿವ ದಿನೇಶ್ ಗುಂಡೂರಾವ್ ಸಾಮಾಜಿಕ ಜಾಲತಾಣ ಎಕ್ಸ್ ಮೂಲಕ ಪ್ರಕಟಿಸಿದ್ದಾರೆ.

ಹರ್ಷ/ಹೊಂಗಲ್/ಸಚಿವರ ಎಕ್ಸ್ ಖಾತೆ

ಪ್ರದೇಶ ಸಮಾಚಾರ
**09.07.2024**
ನಾಗಲಕ್ಷ್ಮೀ/ಕುಟೀರ

ಯಾರೂ ಸಹ ತಮ್ಮ ಮಕ್ಕಳು, ಬಾಣಂತಿಯರನ್ನು ಕೃ ್ಣ ಕುಟೀರದಲ್ಲಿ ಬಿಡಬಾರದು. ಮೌಢ್ಯತೆ ಪಾಲಿಸಬಾರದು ಎಂದು, ಮಹಿಳಾ ಆಯೋಗದ ಅಧ್ಯಕ್ಷೆ ಡಾಕ್ಟರ್ ನಾಗಲಕ್ಷ್ಮೀ ಚೌಧರಿ ಮನವಿ ಮಾಡಿದ್ದಾರೆ.

ತುಮಕೂರು ಜಿಲ್ಲೆ, ಕೊರಟಗೆರೆ ತಾಲೂಕು ತೋವಿನಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಯ, ಬಿಸಾಡಿಹಟ್ಟಿ ಗ್ರಾಮದ, ಕೃ ್ಣ ಕುಟೀರದಲ್ಲಿದ್ದ, ಬಾಣಂತಿಯರಾದ ಶಿವಮ್ಮ, ರಕ್ಷಿತಾ ಹಾಗೂ ಶಾರದಾ ಮತ್ತು ಮಕ್ಕಳನ್ನು ಅವರ ಮನೆಗಳಿಗೆ ಸೇರಿಸಿ, ಅವರು ಮಾತನಾಡಿದರು.

ಕೃ ್ಣ ಕುಟೀರಕ್ಕೆ ಬೀಗಹಾಕಿ, ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಲಕ್ಷ್ಮೀನಾರಾಯಣ ಅವರಿಗೆ ಹಸ್ತಾಂತರಿಸಿ, ಇನ್ನು ಮುಂದೆ ಅದನ್ನು ಗ್ರಂಥಾಲಯವಾಗಿ ಬಳಸುವಂತೆ, ನಿರ್ದೇಶನ ನೀಡಿದ್ದಾಗಿ ತಿಳಿಸಿದರು.

ಹರ್ಷ/ಹೊಂಗಲ್/ಟಿಟಿಸಿ ತುಮಕೂರು

ಪ್ರದೇಶ ಸಮಾಚಾರ
**09.07.2024**
ಸಂಪೂರ್ಣತಾ/ಅಭಿಯಾನ

ಸುಸ್ಥಿರ ಅಭಿವೃದ್ಧಿಯ 6 ಪ್ರಮುಖ ಮಾನದಂಡಗಳನ್ನು ಸಾಧಿಸಲು, ಕೇಂದ್ರದ ನೀತಿ ಆಯೋಗ, 'ಸಂಪೂರ್ಣತಾ ಅಭಿಯಾನ'ವನ್ನು, ರಾಜ್ಯದ 7 ಆಕಾಂಕ್ಷಿತ ಜಿಲ್ಲೆ, ಹಾಗೂ 14 ತಾಲೂಕುಗಳಲ್ಲಿ ಅನುಷ್ಠಾನಗೊಳಿಸಿದೆ ಎಂದು, ರಾಯಚೂರು ಅಪರ ಜಿಲ್ಲಾಧಿಕಾರಿ ಡಾಕ್ಟರ್ ಕೆ.ಆರ್. ದುರುಗೇಶ್ ತಿಳಿಸಿದ್ದಾರೆ.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಮೂರು ತಿಂಗಳ ಸಂಪೂರ್ಣತಾ ಅಭಿಯಾನಕ್ಕೆ ಚಾಲನೆ ನೀಡಿ, ಮಾತನಾಡಿದರು.

ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ ಮಾತನಾಡಿ, ರಾಯಚೂರಿನ ಸಿರವಾರ ಹಾಗೂ ಮಸ್ಕಿ ತಾಲೂಕುಗಳು, ಸಂಪೂರ್ಣತಾ ಅಭಿಯಾನದಡಿ ಆಯ್ಕೆಯಾಗಿವೆ ಎಂದರು.

ಗರ್ಭಿಣಿಯರ ಆರೈಕೆಗೆ ನೋಂದಣಿ, ತಾಯಂದಿರಿಗೆ ಪೂರಕ ಪೌಷ್ಟಿಕ ಆಹಾರ ಒದಗಿಸುವುದು, ಮಣ್ಣಿನ ಆರೋಗ್ಯ ಕಾರ್ಡ್‌ಗಳ ವಿತರಣೆ ಹಾಗೂ ಸ್ವ-ಸಹಾಯ ಗುಂಪುಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯಕ್ರಮಗಳನ್ನು, ಕಾಲಮಿತಿಯಲ್ಲಿ ಅನು ್ಠಾನಗೊಳಿಸಿ, ಪರಿಣಾಮ ವಿಶ್ಲೇಷಿಸಲು ಯೋಜಿಸಲಾಗಿದೆ ಎಂದರು.

ಹರ್ಷ/ಹೊಂಗಲ್/ಪಿಐಬಿ/ನ್ಯೂಸ್ ಆನ್ ಏರ್/ನೀತಿ ಆಯೋಗ/ಟಿಟಿಸಿ ರಾಯಚೂರು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಪ್ರದೇಶ ಸಮಾಚಾರ
**09.07.2024**
ಕವಿವಿ/ಪ.ವಿ.40

ಕೃತಕ ಬುದ್ಧಿಮತ್ತೆ, ಚಾಟ್ ಜಿಪಿಟಿಯಂತಹ ತಾಂತ್ರಿಕ ಅನ್ವೇಷಣೆಗಳು, ಪತ್ರಕರ್ತರಿಗೆ ಪರ್ಯಾಯವಲ್ಲ; ಆದರೆ, ವೃತ್ತಿಪರತೆಗೆ ಕೌಶಲ ಗಳಿಕೆ ಅನಿವಾರ್ಯ ಎಂದು, ಹಿರಿಯ ಪತ್ರಕರ್ತ ರವಿ ಹೆಗಡೆ ಅಭಿಪ್ರಾಯಪಟ್ಟಿದ್ದಾರೆ.

ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ, ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ, ಸ್ನಾತಕೋತ್ತರ ಅಧ್ಯಯನ ವಿಭಾಗ, ತನ್ನ 40ನೇ ವರ್ಷದ ಸಂಸ್ಥಾಪನಾ ಸಂಭ್ರಮಾಚರಣೆ ಪ್ರಯುಕ್ತ, ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಸಭಾಭವನದಲ್ಲಿ ಆಯೋಜಿಸಿದ ರಾಷ್ಟ್ರೀಯ ಸಮ್ಮೇಳನದಲ್ಲಿ, ಅವರು, ದಿಕ್ಸೂಚಿ ಭಾಷಣ ಮಾಡಿದರು.

<><><>

ರವಿ ಹೆಗಡೆ ಧ್ವನಿ 57 ಸೆಕೆಂದುಗಳು

<><><>

ಬೆಂಗಳೂರು ಉತ್ತರ ವಲಯ ವಿಶ್ವವಿದ್ಯಾಲಯದ ಕುಲಪತಿ, ಡಾಕ್ಟರ್ ನಿರಂಜನ ವಾನಳ್ಳಿ ಅವರು, ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಕೃತಕ ಬುದ್ಧಿಮತ್ತೆಯ ಕಲಿಕೆ ಮತ್ತು ಜವಾಬ್ದಾರಿಯುತ ಬಳಕೆ, ಆದ್ಯತೆಯಾಗಬೇಕು ಎಂದರು.

<><><>

ನಿರಂಜನ ವಾನಳ್ಳಿ ಧ್ವನಿ 44 ಸೆಕೆಂದುಗಳು

<><><>

ವಿಶ್ರಾಂತ ಪ್ರಾಧ್ಯಾಪಕ ಪ್ರೊಫೆಸರ್ ಎ.ಎಸ್.ಬಾಲಸುಬ್ರಮಣ್ಯ ಅವರ ಕೃತಿ 'ಪತ್ರಿಕೋದ್ಯಮದ ಪಲ್ಲಟಗಳು' ಹಾಗೂ ವಿಭಾಗದ ಹಿರಿಯ ವಿದ್ಯಾರ್ಥಿಗಳ ಲೇಖನಗಳ ಸಂಗ್ರಹ 'ಮಾಧ್ಯಮ ಕ್ಷಿತಿಜ' ಪುಸ್ತಕಗಳನ್ನು, ಗಣ್ಯರು ಬಿಡುಗಡೆ ಗೊಳಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊಫೆಸರ್ ಕೆ.ಬಿ.ಗುಡಸಿ, ಅಧ್ಯಕ್ಷತೆ ವಹಿಸಿದ್ದರು.

ಹರ್ಷ/ಉಮೇಶ/ಡಾ.ಜೆ.ಎಂ.ಚಂ/ವಿವೇಕ್

ಪ್ರದೇಶ ಸಮಾಚಾರ
**09.07.2024**
ಮಳೆ/ರಜೆ

ರಾಜ್ಯದ ಕರಾವಳಿ ಜಿಲ್ಲೆಗಳಿಗೆ ನಾಳೆಯಿಂದ ಮೂರು ದಿನಗಳ ಕಾಲ, ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉಡುಪಿ ಜಿಲ್ಲೆಯಾದ್ಯಂತ, ಸತತ ಮಳೆ ಹಿನ್ನೆಲೆ, ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಉಡುಪಿ ಅಪರ ಜಿಲ್ಲಾಧಿಕಾರಿ ಜಿ.ಎಸ್. ಮಮತಾದೇವಿ, ಮುಂಜಾಗ್ರತಾ ಕ್ರಮವಾಗಿ ಇಂದು, ಉಡುಪಿ ಜಿಲ್ಲೆಯ ಎಲ್ಲ ತಾಲೂಕಿನ ಅಂಗನವಾಡಿ ಕೇಂದ್ರ, ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಿದ್ದಾರೆ.

ಚಿಕ್ಕಮಗಳೂರು, ಕೊಪ್ಪ, ಶೃಂಗೇರಿ, ಮೂಡಿಗೆರೆ, ಕಳಸ, ಕೊಟ್ಟಿಗೆಹಾರ ಸೇರಿ, ಮಲೆನಾಡಿನ ಹಲವೆಡೆ ಗಾಳಿ ಸಹಿತ ನಿರಂತರ ಮಳೆಯಾಗುತ್ತಿದೆ. ಶೃಂಗೇರಿಯಲ್ಲಿ ತುಂಗಾ ನದಿ ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿದೆ. ಪ್ರವಾಸಿಗರು ಜಿಲ್ಲೆಯ ಜಲಪಾತಗಳು, ನದಿಗಳು ಹಾಗೂ ಅಪಾಯದ ಸ್ಥಳಗಳಿಗೆ ತೆರಳದಂತೆ, ಜಿಲ್ಲಾಡಳಿತ ಮನವಿ ಮಾಡಿದೆ.

ಹರ್ಷ/ಹೊಂಗಲ್/ಪಿಟಿಸಿ ಉಡುಪಿ/ಕೊಡಗು/ಚಿಕ್ಕಮಗಳೂರು/ಉತ್ತರಕನ್ನಡ

ಪ್ರದೇಶ ಸಮಾಚಾರ
**09.07.2024**
ಡಿಕೆಶಿ/ಅಭಿನಂದನೆ

ಅಣೆಕಟ್ಟೆ ಸುರಕ್ಷತೆ ಪರಿವೀಕ್ಷಣಾ ತಂಡ ಹಾಗೂ ಅಣೆಕಟ್ಟೆ ಸುರಕ್ಷತಾ ಸಂಸ್ಥೆಯ ತಜ್ಞರು, ಮೂರು ದಿನಗಳ ಸತತ ಕಾರ್ಯಾಚರಣೆ ಮೂಲಕ, ಶಿವಮೊಗ್ಗ ಜಿಲ್ಲೆ, ಲಕ್ಕವಳ್ಳಿ ಬಳಿ, ಭದ್ರಾ ಅಣೆಕಟ್ಟೆಯ ಸ್ಲುಸ್ ಗೇಟ್ ಸೋರಿಕೆಯನ್ನು ನಿಲ್ಲಿಸಿ, ರೈತರ ಆತಂಕ ನಿವಾರಿಸಿದ, ನೀರಾವರಿ ನಿಗಮದ ಸಿಬ್ಬಂದಿ ಹಾಗೂ ಮುಳುಗು ತಜ್ಞರಿಗೆ ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ್ ಅಭಿನಂದಿಸಿದ್ದಾರೆ.

ಪ್ರದೇಶ ಸಮಾಚಾರ
**09.07.2024**
ನಿಧನ

ಸಿನೆಮಾ ಸಾಹಿತಿ, ಧಾರವಾಡ ಮೂಲದ ವಸಂತ ಮೊಕಾಶಿ ಪುಣೇಕರ ಧಾರವಾಡದಲ್ಲಿ ನಿಧನರಾದರು. ಅವರಿಗೆ 70 ವರ್ಷ ವಯಸ್ಸಾಗಿತ್ತು.

ಕನ್ನಡದ ಮೇರು ನಟ  ಶಂಕರನಾಗ್ ಅಭಿನಯದ ಆಕ್ಸಿಡೆಂಟ್ ಸಿನೆಮಾಕ್ಕೆ ಅವರು ಸಾಹಿತ್ಯಕಾರರಾಗಿದ್ದರು.

1985ನೇ ಸಾಲಿನ, ಸಾಮಾಜಿಕ ಚಲನಚಿತ್ರಕ್ಕೆ ರಾಷ್ಟ್ರೀಯ ಪುರಸ್ಕಾರ ಸಹಿತ, ಐದು ರಾಜ್ಯ ಪುರಸ್ಕಾರಗಳಿಗೆ ವಸಂತ ಮೊಕಾಶಿ ಪುಣೇಕರ ಭಾಜನರಾಗಿದ್ದಾರೆ.

ಹಿರಿಯ ಸಾಹಿತಿ, ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ ಪುರಸ್ಕೃತ ಶಂಕರ ಮೊಕಾಶಿ ಪುಣೇಕರ ಅವರ ಸುಪುತ್ರರಾಗಿದ್ದ ವಸಂತ, 'ಗಂಗವ್ವ ಗಂಗಾಮಾಯಿ' ಚಿತ್ರವನ್ನು ನಿರ್ದೇಶಿಸಿದ್ದಾರೆ.

<><><>

ಮಾಜಿ ಸಚಿವ ಬಿ.ಸಿ ಪಾಟೀಲ್ ಅವರ ಅಳಿಯ, ಪ್ರತಾಪ್ ಕುಮಾರ್ ಅಸಹಜ ರೀತಿಯಲ್ಲಿ, ಸೋಮವಾರ ಮೃತಪಟ್ಟಿದ್ದಾರೆ. ಅವರಿಗೆ 41 ವರ್ಷ ವಯಸ್ಸಾಗಿತ್ತು.

ಹೊನ್ನಾಳಿ ತಾಲೂಕು ಮಲೆಬೆನ್ನೂರಿನಿಂದ ಶಿವಮೊಗ್ಗಕ್ಕೆ ಸಾಗಿಸುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಚನ್ನಗಿರಿ ತಾಲೂಕು ಕತ್ತಲಗೆರೆ ಗ್ರಾಮದಲ್ಲಿ ಇಂದು ಅಂತ್ಯಕ್ರಿಯೆ ಜರುಗಲಿದೆ ಎಂದು, ಮಾಜಿ ಸಚಿವ ಬಿ.ಸಿ ಪಾಟೀಲ್ ತಿಳಿಸಿದ್ದಾರೆ.

ಹರ್ಷ/ಹೊಂಗಲ್/ವಿವೇಕ/ಪಿಟಿಸಿ ಶಿವಮೊಗ್ಗ

ಈಗ ಸಂಕ್ಷಿಪ್ತ ಸುದ್ದಿಗಳು:

ಕರ್ನಾಟಕ ನಾಮಕರಣ ಸಂಭ್ರಮ 50ರ ಅಂಗವಾಗಿ, ಜ್ಯೋತಿ ರಥ ಯಾತ್ರೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ಮಾರ್ಗವಾಗಿ, ಇಂದು ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಲಿದೆ.

ತುಮಕೂರು ಜಿಲ್ಲೆ, ಗುಬ್ಬಿ ಪಟ್ಟಣದಲ್ಲಿ ಕೀಟನಾಶಕ ಮಾರಾಟ ಅಂಗಡಿ ಮಳಿಗೆಯೊಂದರ ಮೇಲೆ, ಕೃಷಿ ಇಲಾಖೆ ಜಾಗ್ರತ ದಳದ ಅಧಿಕಾರಿಗಳು ದಾಳಿ ನಡೆಸಿ, ನೋಂದಾಯಿತವಲ್ಲದ ಕೀಟನಾಶಕವನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ತಾಲೂಕಿನ, ಪ್ರಸಿದ್ಧ ಘಾಟಿ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದ ಹುಂಡಿಯಲ್ಲಿ, 66 ಲಕ್ಷದ 83 ಸಾವಿರದ 320 ರೂಪಾಯಿ ಹಣ ಸಂಗ್ರಹವಾಗಿದೆ ಎಂದು, ಕಾರ್ಯನಿರ್ವಾಹಕ ಅಧಿಕಾರಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ರಾಷ್ಟ್ರೀಯ ವಯೋಶ್ರೀ ಯೋಜನೆಯಡಿ, ಗದಗ ಜಿಲ್ಲೆಯ ಹಿರಿಯ ನಾಗರಿಕರ ಹಾಗೂ ವಿಶೇಷಚೇತನರಿಗೆ ಶಿಬಿರ, ಸೋಮವಾರದಿಂದ ಆರಂಭಗೊಂಡಿದ್ದು, ಈ ತಿಂಗಳ 16ರ ವರೆಗೆ ಜರುಗಲಿದೆ.

ರಾಜ್ಯ ಮಾನವ ಹಕ್ಕುಗಳ ಆಯೋಗ, ಇಂದಿನಿಂದ 11ನೇ ತಾರೀಖಿನ ವರೆಗೆ, ಗದಗ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಸಭೆ ನಡೆಸಲಿದೆ.

ಹಾವೇರಿ ಜಿಲ್ಲೆಯಲ್ಲಿ ಅಡಿಕೆ, ಮಾವು, ಶುಂಠಿ, ಹಸಿ ಮೆಣಸಿನಕಾಯಿ ಬೆಳೆಗಳಿಗೆ ವಿಮೆ ಕಂತು ಕಟ್ಟಲು, ಈ ತಿಂಗಳ 31 ಕೊನೆಯ ದಿನವಾಗಿದೆ ಎಂದು, ತೋಟಗಾರಿಕೆ ಇಲಾಖೆ ಮಾಹಿತಿ ನೀಡಿದೆ.

ಭಾರತೀಯ ವಾಯುಪಡೆಯ, ಅಗ್ನಿಪಥ್ ಯೋಜನೆಯಡಿ, ಅಗ್ನಿವೀರ್ ವಾಯು ಸೇವೆಗಾಗಿ, ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಜಾಲತಾಣ – **agnipath vayu.cdac.in** ಭೇಟಿ ನೀಡಬಹುದು.

*ಹರ್ಷ/ಹೊಂಗಲ್/ಕೆ.ವಾ.ಇ. ಜಿಲ್ಲಾವಾರು/ಜಿಲ್ಲಾವಾರು ಪಿಟಿಸಿಗಳು/ಎಚ್.ಆರ್.ಸುಧೀಂದ್ರ/ರಾಜಶ್ರೀ*

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

- ಡೆಂಘಿ ನಿಯಂತ್ರಣಕ್ಕೆ, ಅಧಿಕಾರಿಗಳು ಸಮನ್ವಯದಿಂದ ಸಮರೋಪಾದಿ ಕೆಲಸ ಮಾಡಿ – ಮುಖ್ಯಮಂತ್ರಿ ಸಿದ್ದರಾಮಯ್ಯ, ನಿರ್ದೇಶನ.
- ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ಸಾರ್ವಜನಿಕರು ಸಹಕರಿಸಿ – ಆರೋಗ್ಯ ಇಲಾಖೆ, ಕರೆ.
- ಮೌಢ್ಯತೆ ಆಚರಿಸಲು, ಮಕ್ಕಳು ಬಾಣಂತಿಯರನ್ನು, ಕೃ ಷ್ಣ ಕುಟೀರದಲ್ಲಿ ಬಿಡಬೇಡಿ – ನಾಗಲಕ್ಷ್ಮೀ ಚೌಧರಿ, ಮನವಿ.
- ಕರಾವಳಿಯಲ್ಲಿ ಮುಂದಿನ ಮೂರು ದಿನ ಧಾರಾಕಾರ ಮಳೆ; ಉಡುಪಿ ಜಿಲ್ಲೆಯ ಶಾಲಾ–ಕಾಲೇಜುಗಳಿಗೆ ಇಂದು ರಜೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ

ಪ್ರದೇಶ ಸಮಾಚಾರ
**09.07.2024**
ಪ್ರಶಸ್ತಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ, **2019** ರಿಂದ **2023**ರ **5** ವರ್ಷಗಳ ಅವಧಿಗೆ, ಟಿಎಸ್ಸಾರ್ ಸ್ಮಾರಕ ಪತ್ರಿಕೋದ್ಯಮ ಪ್ರಶಸ್ತಿ ಹಾಗೂ ಮೊಹರೆ ಹಣಮಂತರಾಯ ಪತ್ರಿಕೋದ್ಯಮ ಪ್ರಶಸ್ತಿಗಳಿಗೆ, ಆಯ್ಕೆ ಸಮಿತಿ ರಚಿಸಲಾಗಿದ್ದು, ಪ್ರಶಸ್ತಿಗೆ ನಾಮ ನಿರ್ದೇಶನಗಳನ್ನು ಆಹ್ವಾನಿಸಲಾಗಿದೆ.

ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಪಿ.ಎನ್.ದೇಸಾಯಿ ಅವರ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ, ಹಿರಿಯ ಪತ್ರಕರ್ತ ಈಶ್ವರ ದೈತೋಟ, ಶಾಂತಲಾ ಧರ್ಮರಾಜ್ ಹಾಗೂ ಎಂ.ಎಸ್.ಮಣಿ ಸದಸ್ಯರಾಗಿದ್ದಾರೆ.

ಪ್ರಶಸ್ತಿ ಮೊತ್ತ **2** ಲಕ್ಷ ರೂಪಾಯಿಯಾಗಿದ್ದು, ಕನ್ನಡ ಪತ್ರಿಕೋದ್ಯಮ, ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮದಲ್ಲಿ ಕನಿಷ್ಠ **30** ವರ್ಷಗಳ ಸೇವೆ ಸಲ್ಲಿಸಿರಬೇಕು. ಜೊತೆಗೆ ಕನ್ನಡ ಭಾಷೆಯ ಬೆಳವಣಿಗೆಗೆ ವಿಶೇಷ ಕೊಡುಗೆ ನೀಡಿದವರನ್ನು ಪ್ರಶಸ್ತಿಗೆ ಪರಿಗಣಿಸಲಾಗುವುದು ಎಂದು ವಾರ್ತಾ ಇಲಾಖೆ ತಿಳಿಸಿದೆ.

ಹರ್ಷ/ಹೊಂಗಲ್/ಕೆ.ವಾ.ಇ.ಬೆಂ.

ಪ್ರದೇಶ ಸಮಾಚಾರ
**09.07.2024**
ಇಲಿ/ಜ್ವರ

ಹಾವೇರಿ ತಾಲೂಕು ಬೆಂಚಿಹಳ್ಳಿ ಗ್ರಾಮದ, **12** ವರ್ಷದ ಬಾಲಕ ಇಲಿ ಜ್ವರದಿಂದ ಬಳಲುತ್ತಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾಕ್ಟರ್ ಪಿ.ಆರ್.ಹಾವನೂರು ತಿಳಿಸಿದ್ದಾರೆ.

ಇಲಿಯ ಮಲ ಹಾಗೂ ಮೂತ್ರದಲ್ಲಿರುವ ಬ್ಯಾಕ್ಟೀರಿಯಾ, ಮನುಷ್ಯನ ದೇಹ ಪ್ರವೇಶಿಸಿದಾಗ ಇಲಿ ಜ್ವರ ಬರುತ್ತದೆ.

ಈ ಜ್ವರಕ್ಕೆ ಚಿಕಿತ್ಸೆ ಲಭ್ಯವಿದ್ದು,  ಬಾಲಕನ ಆರೋಗ್ಯವೂ ಸುಧಾರಿಸುತ್ತಿದೆ ಎಂದು ಮಾಹಿತಿ ನೀಡಿದ್ದಾರೆ.

ಬಾಲಕ ವಾಸವಿದ್ದ ಗ್ರಾಮದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ನಿರತರಾಗಿದ್ದಾರೆ.

ಹರ್ಷ/ಹೊಂಗಲ್/ಪಿಟಿಸಿ ಹಾವೇರಿ

ಪ್ರದೇಶ ಸಮಾಚಾರ
**09.07.2024**
ಪರಮೇಶ್ವರ್/ಗ್ಯಾರಂಟಿ

ರಾಜ್ಯದ ಮಹತ್ವಾಕಾಂಕ್ಷೆಯ, ಪಂಚ ಖಾತ್ರಿ ಯೋಜನೆಗಳಿಗಾಗಿ, **58** ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲಾಗುತ್ತಿದ್ದು, ಸಾಧಕ–ಬಾಧಕಗಳನ್ನು ನೋಡಿ ಕ್ರಮ ಜರಗಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದು, ಗೃಹ ಖಾತೆ ಸಚಿವ ಡಾಕ್ಟರ್ ಜಿ.ಪರಮೇಶ್ವರ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ರಾಜ್ಯದ ಆರ್ಥಿಕ ವ್ಯವಸ್ಥೆ ಆಧರಿಸಿ, ಕ್ರಮ ಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಗ್ಯಾರಂಟಿ ಯೋಜನೆಗಳ ಜಾರಿಯಲ್ಲಿ, ಸಮಸ್ಯೆ ಕಂಡುಬಂದರೆ, ಅವುಗಳನ್ನು ನಿವಾರಿಸಲು ಪೂರಕ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದರು.

ಹರ್ಷ/ಹೊಂಗಲ್/ಗೈ.ಸ.ಎಕ್ಸ್ ಖಾತೆ

ಪ್ರದೇಶ ಸಮಾಚಾರ
**09.07.2024**
ಶ್ರೀಕಂಠೇಗೌಡ/ಪಿಂಚಣಿ

ರಾಜ್ಯ ಸರ್ಕಾರಿ ನೌಕರರ, ವೇತನ ತಾರತ್ಯಮ್ಯ ಸರಿಪಡಿಸುವಂತೆ, ಜೆ.ಡಿ.ಎಸ್ ಪಕ್ಷದ ಹಿರಿಯ ನಾಯಕ, ಕೆ.ಟಿ.ಶ್ರೀಕಂಠೇಗೌಡ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮೈಸೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರಿ ನೌಕರರ ವೇತನಕ್ಕೆ ಹೋಲಿಸಿದರೆ, ರಾಜ್ಯ ಸರ್ಕಾರಿ ನೌಕರರಿಗೆ ವೇತನದಲ್ಲಿ ಶೇಕಡ 30 ರಿಂದ 40 ರಷ್ಟು ಕಡಿಮೆ ಇದೆ. ರಾಜ್ಯ ಸರ್ಕಾರ ಈ ತಾರತ್ಯಮ್ಯ ಸರಿಪಡಿಸಬೇಕು. 7ನೇ ವೇತನ ಆಯೋಗ ವರದಿ ಅನ್ವಯ ನೂತನ ವೇತನ ಶ್ರೇಣಿ ಜಾರಗೊಳಿಸಬೇಕು ಎಂದು, ಆಗ್ರಹಿಸಿದರು.

ಹರ್ಷ/ಹೊಂಗಲ್/ಡಿ ಚಂದನ

ಪ್ರದೇಶ ಸಮಾಚಾರ
**09.07.2024**
ಆಸ್ತಿತೆರಿಗೆ/ವಿನಾಯಿತಿ

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ, ಪ್ರಸಕ್ತ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆಯನ್ನು, ಈ ತಿಂಗಳ ಅಂತ್ಯದ ವರೆಗೆ ಪೂರ್ಣ ಪ್ರಮಾಣದಲ್ಲಿ ಪಾವತಿಸಿದಲ್ಲಿ, ಶೇಕಡ 5 ರ ಷ್ಟ ವಿನಾಯಿತಿ ಸಿಗಲಿದೆ ಎಂದು, ನಗರಾಭಿವೃದ್ಧಿ ಇಲಾಖೆ ತಿಳಿಸಿದೆ.

ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರದ ಮನವಿಯಂತೆ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ.

ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಎಲ್. ರಘುನಾಥ್ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ, ಈ ಕುರಿತು ಪತ್ರ ಬರೆದಿದ್ದರು.

ಹರ್ಷ/ಉಮೇಶ/ಕೆ.ವಾ.ಇ. ಎಕ್ಸ್ ಜಾಲತಾಣ